ಒ.ಎಸ್. ನಂ.95/2022
ಪಿಡಬ್ಲು-1

ದಿನಾಂಕ 04.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

ಮಾರಡಗಿ ಎಸ್ ಎಂ ಗ್ರಾಮದ ಸರ್ವೆ ನಂ.83/17 ರ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಮಾನ್ಯ 3ನೆ ಹೆಚ್ಚುವರಿ ಸತ್ರ ನ್ಯಾಯಾಲಯದ ಮೇಲ್ಮನವಿ ನಂ.5/2018 ರ ತೀರ್ಪಿನ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಮಾನ್ಯ 3ನೆ ಹೆಚ್ಚುವರಿ ಸತ್ರ ನ್ಯಾಯಾಲಯದ ಮೇಲ್ಮನವಿ ನಂ.5/2018 ರ ಡಿಕ್ರಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಮಾನ್ಯ ಹಿರಿಯ ಶ್ರೇಣಿ ಜೇವರ್ಗಿಯ ಅಸಲು ದಾವೆ ನಂ.116/2012 ರ ಡಿಕ್ರಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ